ANNOUNCEMENT

MR. SPEAKER.—Under rule 9 of the Rules of Procedure and Conduct of Business in the Legislative Assembly, I nominate the following members to the Panel of Chairman for the current session.

1. Sri H.T. Krishnappa
2. Sri M.C. Basappa
3. Sri S. Muniraju
4. Sri S.S. Arakeri

Representation by Member

re: Privilege motion against Prajavani Daily Paper.

† ಶ್ರೀ ಹೆಚ್.ಡಿ. ದೇವೇಗೌಡ (ಹೊಳೀನರಸೀಪುರ).—ಮಾನ್ಯ ಅಧ್ಯಕ್ಷರೇ, ನಾನು ತಪ್ಪಿ ಕಾರ್ಯಾಲಯಕ್ಕೆ ಹಕ್ಕುಚ್ಯುತಿಗೆ ಸಂಬಂಧಪಟ್ಟಂತೆ ಒಂದು ಸೂಚನೆಯನ್ನು ಕಳಂಹಿಸಿಕೊಟ್ಟಿದ್ದೇನೆ. ಅದನ್ನು ತೆಗೆದುಕೊಳ್ಳಲಿಕ್ಕೆ ತಾವು ಅನುಮತಿ ಕೊಡಬೇಕೆಂದು ವಿನಂತಿ ಮಾಡುತ್ತೇನೆ. ಜನವರಿ ೨೮ನೇ ತಾರೀಖು ವಿಧಾನ ಮಂಡಲದ ಜಂಟೀ ಅಧಿವೇಶನ ನಡೆದಂಥ ಕಾಲದಲ್ಲಿ ಆದಂಥ ಘಟನೆ ಬಗ್ಗೆ ಪ್ರಜಾವಾಣಿ ಪತ್ರಿಕೆಯಲ್ಲಿ ಏನು ವರದಿ ಮಾಡಿದ್ದಾರೆ ಇದನ್ನು ನೋಡಿದರೆ ನಾನು ಈ ಸದನದಲ್ಲಿ ಶಾಸಕನಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದರಿಂದ ನನ್ನ ಹಕ್ಕಿಗೆ ಭಂಗ ಬಂದಿದೆ, ಚ್ಯುತಿ ಬಂದಿದೆ ಈ ಪತ್ರಿಕೆಗಳ ನಡವಳಿಕೆಯಿಂದ ನಾವು ಈ ಸದನದಲ್ಲಿ ಕುಳಿತು ಕೆಲಸ ಮಾಡುವುದೇ ಬಹಳ ಕಷ್ಟವಾಗಿದೆ ಯೆಂಬುದು ನನ್ನ ಅಭಿಪ್ರಾಯ. ಪ್ರಜಾವಾಣಿ ಪತ್ರಿಕೆಯಲ್ಲಿ ಜಂಟೀ ಅಧಿವೇಶನದ ನಂತರ ದೇವೇಗೌಡರಿಗೆ ಬೇಡವಾದ ಕಪ್ಪು ಪಟ್ಟಿ ಎಂಬ ಶಿರೋನಾಮೆಯಲ್ಲಿ ವರದಿ ಬಂದಿದೆ. ಜಂಟೀ ಅಧಿವೇಶನ ಇಲ್ಲಿ ನಡೆಯಿತು. ಸಂವಿಧಾನಾತ್ಮಕವಾಗಿ ರಾಜ್ಯಪಾಲರು ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡುವುದನ್ನು ಅಡ್ಡಿಪಡಿಸುವುದಕ್ಕೆ ಸಾಧ್ಯವಿಲ್ಲ. ನಮ್ಮ ದುರ್ದೈವ, ಲೋಕಸಭೆಯಲ್ಲಾಗಲೀ, ಶಾಸನ ಸಭೆಗಳಲ್ಲಾಗಲೀ ಜಂಟೀ ಅಧಿವೇಶನವನ್ನುದ್ದೇಶಿಸಿ ರಾಷ್ಟ್ರಪತಿಗಳು, ರಾಜ್ಯಪಾಲರುಗಳು ಮಾತನಾಡತಕ್ಕ ಕಾಲದಲ್ಲಿ ವಿರೋಧಪಕ್ಷಗಳು ಮತ್ತು ರಾಜಕೀಯ ಪಕ್ಷಗಳು ಹೇಗೆ ನಡೆದುಕೊಳ್ಳಬೇಕು ಎಂಬುದರ ಬಗ್ಗೆ ಸರಿಯಾದ ನಿಯಮಗಳನ್ನು ಪಾಲಿಸಿಕೊಂಡು ಬರುವುದರಲ್ಲಿ ಹಿಂದೆ ಬಿದ್ದಿದ್ದೇವೆ. ಹಿಂದೆ ನಾನು ವಿರೋಧಪಕ್ಷದ ನಾಯಕನಾಗಿದ್ದಾಗ ಒಂದು ಘಟನೆ ನಡೆಯಿತು. ಆಗ ಶ್ರೀಮಾನ್ ಎಸ್.ಎಂ. ಕೃಷ್ಣ ಅವರು ಸಂಸದೀಯ ವ್ಯವಹಾರಗಳ ಮಂತ್ರಿಗಳಾಗಿದ್ದರು, ಈಗ ಯಾರು ವಿರೋಧಪಕ್ಷದ ನಾಯಕರಾಗಿದ್ದಾರೆ ಅವರೇ ಆಂದಿನ ಮುಖ್ಯ ಮಂತ್ರಿಗಳಾಗಿದ್ದರು. ಆಗ ವಿರೋಧ ಪಕ್ಷದಲ್ಲಿದ್ದಂಥ ಸದಸ್ಯರು ರಾಜ್ಯಪಾಲರ ಪೀಠದ ಬಳಿ ಹೋಗಿ ರಾಜ್ಯಪಾಲರು ತಮ್ಮ ಕರ್ತವ್ಯವನ್ನು ನಡೆಸುವುದಕ್ಕೆ ಅಡ್ಡಿಪಡಿಸಲು ಪ್ರಯತ್ನ ಪಟ್ಟ ಸನ್ನಿವೇಶದಲ್ಲಿ ಅದನ್ನು ತಡೆಯುವುದಕ್ಕೆ ನಾನು ಪ್ರಯತ್ನ ಮಾಡಿದೆ. ವಿರೋಧಪಕ್ಷದ ಮುಖಂಡನಾಗಿ ಕೆಲಸ ಮಾಡುವ ಕಾಲದಲ್ಲಿ ನಾನು ನನ್ನ ಜವಾಬ್ದಾರಿಯನ್ನು ಅರಿತುಕೊಂಡು ಕೆಲಸ ಮಾಡಿದೆ. ರಾಜಕೀಯ ಪರಿಸ್ಥಿತಿಯಲ್ಲಿ ಬದಲಾವಣೆಯಾಗಿರಬಹುದು. ಆದರೆ ಸಂವಿಧಾನಾತ್ಮಕವಾಗಿ ಕೆಲಸ ಮಾಡುವುದಕ್ಕೆ ಹಕ್ಕು ಚ್ಯುತಿ ತರುವುದು ಸದನಕ್ಕೂ ಗೌರವ ತರುವಂಥದಲ್ಲ, ಯಾರಿಗೂ ಗೌರವ ತರುವಂಥದಲ್ಲ ಎಂದು ಭಾವಿಸುತ್ತೇನೆ. ಅದೇನೇ ಇರಲಿ. ''ಬೇಡವಾದ ಕಪ್ಪುಪಟ್ಟಿ'' ದೇವೇಗೌಡರು ಕಪ್ಪು ಪಟ್ಟಿಯನ್ನು ಹಾಕಲಿಲ್ಲವೆಂದು ವರದಿ ಮಾಡಿದರೆ ಅದು ಸರಿಯೆ ? ಅಂದು ನಮ್ಮ ಶಾಸಕಾಂಗ ಪಕ್ಷವು ಸಭೆ ಸೇರಿ, ರಾಜ್ಯಪಾಲರು ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡತಕ್ಕ ಸನ್ನಿವೇಶದಲ್ಲಿ ನಾವು ಯಾವ ರೀತಿ ನಡೆದುಕೊಳ್ಳಬೇಕು, ಇತ್ತೀಚೆಗೆ ಸರ್ಕಾರವು ಹಲವಾರು ಜ್ವಲಂತ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲವಾಗಿರುವ ಬಗ್ಗೆ ನಮ್ಮ ಅಸಮಾಧಾನವನ್ನು ಯಾವ ರೀತಿ ವ್ಯಕ್ತಪಡಿಸಬೇಕು ಎನ್ನುವುದನ್ನೆಲ್ಲ ಚರ್ಚೆ ಮಾಡಿ, ನಮ್ಮ ಪಕ್ಷದ ನಾಯಕರಾದ ಶ್ರೀ ಬೊಮ್ಮಾಯಿಯವರು ಒಂದು ಹೇಳಿಕೆಯನ್ನು ಕೊಡಬೇಕು, ನಂತರ ನಾವು ಸಭಾ ತ್ಯಾಗ ಮಾಡಬೇಕೆಂದು ನಿರ್ಣಯ ಮಾಡಿದ್ದೆವು. ಅದಕ್ಕನುಗುಣವಾಗಿ ಶ್ರೀ ಬೊಮ್ಮಾಯಿಯವರು ಅಂದು ಒಂದು ಹೇಳಿಕೆ ಕೊಟ್ಟರು. ಆ ಸಂದರ್ಭದಲ್ಲಿ ಅದು ಕೆಲವರಿಗೆ ಕೇಳಿಸುವುದಕ್ಕೆ ತೊಂದರೆಯಾಗಿರಬಹುದು. ಅಂದು ಶ್ರೀ ರಾಮದೇವ್ ಅವರೊಬ್ಬರನ್ನು